ಅಭಿವೃದ್ಧಿಪಡಿಸಿದ್ದೀರಾ ಎನ್ನುವುದು ಒಂದು, ಇದರ ಅಂಕಿಅಂಶ ಜಿಲ್ಲಾವಾರು ಕೊಡಬೇಕಾಗಿತ್ತು, ಅವರು ಕೊಡಲಿಲ್ಲ. ಎರಡನೆಯದು, ಯಾವ ಆಳತೆಗೋಲಿನ ಮೇಲೆ ತಾವು 13114 ಮೆಟ್ರಿಕ್‌ಟನ್ ಗೂಡು ಉತ್ಪಾದನೆ ಆಗಿದೆ ಅಂತ ಹೇಳುತ್ತೀರ, ದಯಮಾಡಿ ತಿಳಿಸಬೇಕು. ಮೂರನೆಯದು 34, 300 ಎಕರೆಯಲ್ಲಿ ಸುಮಾರು 1.78 ಲಕ್ಷ ಜನರಿಗೆ ರೇಷ್ಮೆ ಸೌಲಭ್ಯ ಕೊಡಲಾಗಿದೆ ಎಂದಿದ್ದೀರಿ, ಒಂದು ಎಕರೆಯಲ್ಲಿ ಎಷ್ಟು ಜನರಿಗೆ ಕೊಡಲು ಸಾಧ್ಯ ? ಒಂದು ಎಕರೆ ಹಿಪ್ಪುನೇರಳೆ ಬೆಳೆದರೆ ಅದು ಮೊಟ್ಟೆಯಿಂದ ಹಿಡಿದು ರೇಷ್ಮೆಯಾಗುವತನಕ ಒಂದು ಎಕರೆಗೆ ಎಷ್ಟು ಜನರಿಗೆ ಉದ್ಯೋಗ ಕೊಡಲು ಸಾಧ್ಯ ?

ಶ್ರೀ ಎಂ. ಮಹಾದೇವ್ : ಮೊಟ್ಟೆ ಉತ್ಪಾದನೆ ಆಧಾರದ ಮೇಲೆ ಇಷ್ಟು ಗೂಡು ಆಗುತ್ತದೆ ಅಂತ ಹೇಳುತ್ತೇನೆ. ತಮಗೂ ಅನುಭವ ಇದೆ. 93ನೇ ಸಾಲಿನ ಆಧಾರದ ಮೇಲೆ ನಾವು ಇಷ್ಟು ಜನರಿಗೆ ಉದ್ಯೋಗವಕಾಶ ಕೊಟ್ಟಿದ್ದೇವೆ. ಅದನ್ನು ಉತ್ತಮಪಡಿಸಬೇಕೆಂದು ತಾವು ಸಲಹೆ ಕೊಡುತ್ತಿದ್ದೀರಿ. ಸರ್ಕಾರ ಅದನ್ನು ಇಂಪ್ರೂವ್ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಶಿವಮೊಗ್ಗದಲ್ಲಿ ಬಹಳ ಒಳ್ಳೆಯ ಕಟ್ಟಡಗಳು ಬಂದಿದೆ. ಆದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಇಲಾಖೆಯವರು ಖರ್ಚು ಮಾಡಿದ್ದಾರೆ. ಅಧಿಕಾರಿಗಳು ಕೂಡ ಬಹಳ ಜನರು ಇದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳಾದ ಕಾಗೋಡು ತಿಮ್ಮಪ್ಪನವರಿಗೆ ಗೊತ್ತಿದೆ. ಆದರೆ ಇಷ್ಟತ್ತಿನವರೆಗೂ ಅಲ್ಲೇನು ಪ್ರೋಗ್ರೆಸ್ ಆಗಿಲ್ಲ. ನೀರಾವರಿ ಇಲಾಖೆಯನ್ನು ಕನ್‌ಸಲ್ಟ್ ಮಾಡುತ್ತೇವೆಂದು ಹೇಳಿದ್ದಾರೆ, ಸಂತೋಷ. ತಮ್ಮ ಇಲಾಖೆಯ ಕಟ್ಟಡವನ್ನು ಯಾರ್ಯಾರೋ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ತನಿಖೆಯಾಗಬೇಕು. ಫೆಬ್ರವರಿ ತಿಂಗಳಲ್ಲಿ ತಾವು ಬಂದಿದ್ದೀರಿ. ತಮ್ಮ ಅಧಿಕಾರಿಗಳು ಬರೀ ತಪ್ಪು ಮಾಹಿತಿ ಕೊಟ್ಟಿದ್ದಾರೆ. ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೇ, ಯಾವ ಯಾವ ಫಾರಂಗಳಲ್ಲಿ ಎಷ್ಟೆಷ್ಟು ಕಟ್ಟಡಗಳಿವೆ, ಅದರ ಮಾಹಿತಿಯನ್ನು ನಾವು ತರಿಸಿಕೊಳ್ಳುತ್ತಿದ್ದೇವೆ. ಅದನ್ನು ಯಾವ ರೀತಿ ಉಪಯೋಗಿಸಿಕೊಳ್ಳಬೇಕೋ ಅದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಎ. ರಾಮದಾಸ್ : ಖರ್ಚಿನ ಬಗ್ಗೆ ತನಿಖೆಯನ್ನು ಮಾಡಬೇಕು. ಇಲಾಖೆಯಿಂದ ತನಿಖೆ ಮಾಡಿ ವರದಿ ಕೊಡುವುದಾದರೂ ಆಗಬೇಕು. ತಮ್ಮ ಬಗ್ಗೆ ಯಾವ ವಿಚಾರವನ್ನು ಹೇಳುತ್ತಿಲ್ಲ. ಇಲಾಖೆಯಲ್ಲಿ ಅನಾವಶ್ಯವಾಗಿ ಆಗಿಲ್ಲದೇ ಇರುವ ಖರ್ಚುಗಳೆಲ್ಲವನ್ನು ಕೊಟ್ಟು ಮಾಡಿರುವ ಅವ್ಯವಹಾರವನ್ನು ನೀವೇ ಇಟ್ಟಿದ್ದೀರಿ. ಇದರ ಬಗ್ಗೆ ತನಿಖೆ ಮಾಡಲಿಕ್ಕೆ ಸಮಸ್ಯೆಯೇನು ? ಇದು ಸರ್ಕಾರದ ಹಣ.

ಅಧ್ಯಕ್ಷರು : ಅದನ್ನು ಪರಿಶೀಲಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಮಹದೇವ್ : ತಮ್ಮ ಕಳಕಳಿಯನ್ನು ಸರ್ಕಾರ ಬಹಳ ತೀವ್ರವಾಗಿ ಗಮನಿಸಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಅಗತ್ಯಕ್ರಮ ಕೈಗೊಳ್ಳುತ್ತೇವೆ. ತನಿಖೆ ಅವಶ್ಯಕತೆ ಇದ್ದರೆ ತನಿಖೆಯನ್ನೂ ಮಾಡುತ್ತೇವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಟಿ.ಎಂ.ಸಿ. ಆಸ್ತಿಯ ವಿಲೇವಾರಿ

124 (1227) ಶ್ರೀ ಬಸವರಾಜ್ ಮಂಡಿಮಠ್ ಜಿ (ಚಿಳ್ಳಕೆರೆ): ಮಾನ್ಯ ನಗರಾಭಿವೃದ್ಧಿ ಸಚಿವರು

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ನಗರ ಪುರಸಭೆಗಳ ಎಷ್ಟು ಆಸ್ತಿಯನ್ನು ಪರಭಾರೆ ಮಾಡಿದ್ದಾರೆ. (ಪ್ರತ್ಯೇಕ ವಿವರ ನೀಡುವುದು).

ಆ) ಸದರಿ ನಗರಸಭೆ : ಪುರಸಭೆಗಳ ಆಸ್ತಿಗಳ ಮರಾಟದ ವಿವರದ ಬಗ್ಗೆ ದಾಖಲಾತಿ (ರಿಜಿಸ್ಟರ್) ಇಟ್ಟಿದ್ದಾರೆಯೇ ?

ಇ) ಚಳ್ಳಕೆರೆ ಪುರಸಭೆಯ ವ್ಯಾಪ್ತಿಗೆ ಬರುವ ಈ ರೀತಿ ವಿಲೇಯಾದ ಆಸ್ತಿಗಳ ವಿವರಗಳ ಬಗ್ಗೆ ದಾಖಲಾತಿ ಇಡಲಾಗಿದೆಯೆ ?

ಈ) ಈ ಆಸ್ತಿಗಳ ವಿಲೇವಾರಿಗೆ ಯಾವ ಆಧಾರದ ಮೇಲೆ ನಿಗದಿ ಮಾಡಲಾಗಿದೆ ?

ಶ್ರೀ ಬಿ. ಜಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಕಳೆದ 3 ವರ್ಷಗಳ ಅವಧಿಯಲ್ಲಿ ಪರಭಾರೆ ಮಾಡಿದ ಪುರ ನಗರಸಭೆಗಳ ಆಸ್ತಿಗಳ ವಿವರಗಳೂ ಈ ಕೆಳಗಿನಂತಿವೆ.

೧) ನಗರಸಭೆ ಚಿತ್ರದುರ್ಗ	:	6 ನಿವೇಶನಗಳು
೨) ಪುರಸಭೆ ಚಳ್ಳಕೆರೆ	:	8 ನಿವೇಶನಗಳು
೩) ಪುರಸಭೆ ಹಿರಿಯೂರು	:	2 ನಿವೇಶನಗಳು
೪) ಪಟ್ಟಣ ಪಂ. ಹೊಸದುರ್ಗ	:	ಇಲ್ಲ
೫) ಪಟ್ಟಣ ಪಂ. ಮೊಳಕಾಲ್ಮೂರು	:	59 ನಿವೇಶನಗಳು
೬) ಪಟ್ಟಣ ಪಂ. ಹೊಳಲ್ಕೆರೆ	:	36 ನಿವೇಶನಗಳು

ಆ) ಚಿತ್ರದುರ್ಗ ಜಿಲ್ಲೆಯಲ್ಲಿ ಚಿತ್ರದುರ್ಗ ನಗರಸಭೆಯನ್ನು ಹೊರತುಪಡಿಸಿ ಇನ್ನುಳಿದ ಮುನಿಸಿಪಾಲಿಟಿಗಳಲ್ಲಿ ಸಮಾನ ಎಂ. ಎ. ಆರ್-41 ರ ರಿಜಿಸ್ಟರ್‌ನ್ನು ನಿರ್ವಹಿಸಲಾಗಿದೆ.

ಇ) ಕೌಂಸಿಲ್ ಇಚ್ಛಿಸಿದಾಗಿದೆ.

ಈ) ನಗರ ಸ್ಥಳೀಯ ಸಂಸ್ಥೆಗಳ ಕೌನ್ಸಿಲ್‌ಗಳ ತೀರ್ಮಾನದಂತೆ ನಗರಸಭೆಯ ಆಸ್ತಿಗಳನ್ನು ಬಹಿರಂಗ ಹರಾಜಿನಲ್ಲಿ ವಿಲೇಮಾಡಲಾಗುತ್ತದೆ. ಆ ನಂತರ, ಇಂತಹ ಪ್ರಸ್ತಾವನೆಗಳನ್ನು ಸರ್ಕಾರದ ಮಂಜೂರಾತಿಗಾಗಿ ಸಲ್ಲಿಸಲಾಗುತ್ತದೆ. ಅದರಂತೆ ನಗರ ಸ್ಥಳೀಯ ಸಂಸ್ಥೆಗಳ ಕೌನ್ಸಿಲ್‌ಗಳ ತೀರ್ಮಾನದಂತೆ ನಗರ ಸ್ಥಳೀಯ ಸಂಸ್ಥೆಗಳ ಮಳಿಗೆಗಳನ್ನು ಬಹಿರಂಗ ಹರಾಜಿನಲ್ಲಿ ವಿಲೇ ಮಾಡಲಾಗುತ್ತದೆ. ಇನ್ನು ಕೆಲವೊಂದು ಪ್ರಕರಣಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಖಾಲ್ಲಾ ನಿವೇಶನಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದು ಗುತ್ತಿಗೆದಾರರು ಸದರಿ ನಿವೇಶಗಳಲ್ಲಿ ಮಳಿಗೆಗಳನ್ನು

ಕಟ್ಟಿಸಿಕೊಂಡಿದ್ದು ಗುತ್ತಿಗೆ ಅವಧಿ ಮುಗಿದ ನಂತರ ನಗರ ಸ್ಥಳೀಯ ಸಂಸ್ಥೆಗಳ ಕೌನ್ಸಿಲ್‌ನವರು ಇಂತಹ ಗುತ್ತಿಗೆ ಅವಧಿಯನ್ನು ಪುನಃ ೫ ವರ್ಷಕ್ಕೆ ವಿಸ್ತರಿಸಿ ಸರ್ಕಾರದ ಮಂಜೂರಾತಿಗಾಗಿ ಕರ್ನಾಟಕ ಪುರಸಭೆಗಳ ಕಾಯ್ದೆ 1964ರ ಕಲಂ 72(2) ರನ್ವಯ ಸಲ್ಲಿಸುತ್ತಾರೆ.

ಶ್ರೀ ಬಸವರಾಜ್ ಮಂಡಿಮಠ್.ಜಿ. : ಮಾನ್ಯ ಅಧ್ಯಕ್ಷರೇ ಚಳ್ಳಕೆರೆ ಪುರಸಭಾ ನಿವೇಶನಗಳನ್ನು ವಿಲೇವಾರಿ ಮಾಡುವುದಕ್ಕೆ ಮಾನ್ಯ ನಗರಾಭಿವೃದ್ಧಿ ಸಚಿವರು ಹಲವಾರು ಆಧಾರಗಳನ್ನು ಕೊಟ್ಟಿದ್ದಾರೆ. ಈ ಆಧಾರಗಳೆಲ್ಲವನ್ನೂ ಮೀರಿ ಯಾವುದೂ ಆಧಾರವಿಲ್ಲದೆ ಚಳ್ಳಕೆರೆ ಪುರಸಭೆ 167- 147 ಅಡಿ ಅಳತೆಯ ನಿವೇಶವನ್ನು ಚದರಡಿಗೆ 120 ರೂಪಾಯಿಗಳ ದರದಲ್ಲಿ ಒಬ್ಬ ವ್ಯಕ್ತಿಗೆ ಮಂಜೂರು ಮಾಡಿತ್ತು. ಆ ಮಂಜೂರಾತಿ ಆದೇಶದ ಮೇರೆಗೆ ಅಲ್ಲಿಯ ಪುರಸಭೆ ಮುಖ್ಯಾಧಿಕಾರಿ 29,45,880 ರೂಪಾಯಿಗಳ ಬದಲಿಗೆ 2,73,000 ರೂಪಾಯಿಗಳನ್ನು ಮಾತ್ರ ಪಾವತಿಸಿಕೊಂಡು ಆ ನಿವೇಶವನ್ನು ವಿಲೇವಾರಿ ಮಾಡಿದ್ದಾರೆ. ಇದರ ಬಗ್ಗೆ ಸೂಕ್ತವಾದ ತನಿಖೆಯನ್ನು ನಡೆಸುವುದಕ್ಕೆ ಅವಕಾಶವಿದೆಯೇ?

ಶ್ರೀ ಬಿ.ಬಿ.ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೇ, ಚಳ್ಳಕೆರೆ ಪುರಸಭಾ ವ್ಯಾಪ್ತಿಯೊಳಗೆ ನಡೆದಿರುವ ಈ ಒಂದು ಅವ್ಯವಹಾರದ ಘಟನೆಯನ್ನು ಈಗಾಗಲೇ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಂಡು ಅವರು ಹೇಳುವ ದೃಷ್ಟಿಯಲ್ಲಿ ಸುಮಾರು 20-25 ಲಕ್ಷ ರೂಪಾಯಿಗಳಷ್ಟು ಸರ್ಕಾರಕ್ಕೆ ಹಾನಿ ಮಾಡಿದ್ದಾರೆಂದು ಹೇಳಿದ್ದಾರೆ. ಅದರ ಬಗ್ಗೆ ವರದಿ ತರಿಸಿ ಅವರ ಮೇಲೆ ಯೋಗ್ಯ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಹಂಪನಗೌಡ ಬಾದರ್ಲಿ ಅವರ ಪ್ರಶ್ನೆಗೆ ಸರ್ಕಾರದವರು ಟೈಮ್ ಕೇಳಿದ್ದಾರೆ. ಅದೇ ರೀತಿ ಮಾನ್ಯ ರಾಜುಗೌಡರ ಪ್ರಶ್ನೆಗೂ ಟೈಮ್ ಕೇಳಿದ್ದಾರೆ. ಆಮೇಲೆ ಮಾನ್ಯ ಶಂಕರಲಿಂಗೇಗೌಡರ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿದ್ದಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಕ್ಷಮಿಸಬೇಕು ಸಭಾಧ್ಯಕ್ಷರೇ ಈ ಸರ್ಕಾರ ಪಾರದರ್ಶಕವೋ? ಪಾಪಿ ದರ್ಶನವೋ? ಏನಾದರೂ ಜವಾಬ್ದಾರಿ ಇದೆಯೇ? ನಿನ್ನೆಯೆಲ್ಲಾ ಅವರಿಗೆ ತಾವು ಹೇಳಿದ್ದೀರಿ.

ಅಧ್ಯಕ್ಷರು : ಉತ್ತರ ಹೇಳುತ್ತಾರೆ. ಏಕೆ ಟೆನ್‌ಷನ್ ಮಾಡಿಕೊಳ್ಳುತ್ತೀರಿ?

(ಗೊಂದಲ)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಉತ್ತರ ಎಲ್ಲಿ? ಉತ್ತರ ನಮ್ಮ ಕೈಗೆ ಬರಬಾರದೇ?

(ಗೊಂದಲ)

ಅಧ್ಯಕ್ಷರು : ಯೋಗ್ಯತೆ ಎನ್ನುವ ಪದ ಕಡತದಲ್ಲಿ ಹೋಗಿದ್ದರೆ ತೆಗೆದುಹಾಕಿ. ಆ ರೀತಿಯಾದ ಪದಗಳನ್ನು ಉಪಯೋಗಿಸಬಾರದು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಸರ್ಕಾರದಲ್ಲಿ ಎಲ್ಲಿ ಪಾರದರ್ಶಕತೆ ಇದೆ ಸ್ವಾಮಿ?

(ಗೊಂದಲ)